ಅ)	೧. ಸರ್ಕಾರಿ ವೈದ್ಯಕೀಯ ಕಾಲೇಜುಗಳು	-	೪೦೦
	೨. ಖಾಸಗೀ ವೈದ್ಯಕೀಯ ಕಾಲೇಜುಗಳು	-	೨೭೦೫
		ಒಟ್ಟು	೩೧೦೫
	೩. ಸರ್ಕಾರಿ ದಂತ ಕಾಲೇಜುಗಳು	-	೬೦
	೪. ಖಾಸಗೀ ದಂತ ಕಾಲೇಜುಗಳು	-	೨೨೦೧
		ಒಟ್ಟು	೨೨೬೧

ಇ) ಭಾರತೀಯ ವೈದ್ಯ ಪರಿಷತ್ತಿನ ತಿದ್ದುಪಡಿ ವಿಧೇಯಕ 1993 ರನ್ವಯ ಹೊಸ ವೈದ್ಯಕೀಯ ಪರಿಷತ್ತಿನ ತಿದ್ದುಪಡಿ ವಿಧೇಯಕ 1993 ರನ್ವಯ ಹೊಸ ಮಂಜೂರು ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುವುದಿಲ್ಲ. ಆದರೆ, ರಾಜ್ಯ ಸರ್ಕಾರವು ಕೇವಲ ಅವಶ್ಯಕತಾ ಪ್ರಮಾಣ ಪತ್ರವನ್ನು ನೀಡಬಹುದಾಗಿದೆ. ಅದರಂತೆ, ಜನವರಿ 2000 ರಿಂದ 6 ವೈದ್ಯಕೀಯ ಕಾಲೇಜುಗಳು ಮತ್ತು ಒಂದು ದಂತ ಕಾಲೇಜಿಗೆ ಅವಶ್ಯಕತಾ ಪ್ರಮಾಣ ಪತ್ರ ನೀಡಿದೆ.

ಈ) ಇಲ್ಲ

ರಾಜ್ಯದಲ್ಲಿರುವ ಆಸ್ಪತ್ರೆಗಳಲ್ಲಿ ರೋಗ ಮಾಹಿತಿ ಪುಸ್ತಕ ವಿತರಣೆ

2559(2977) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ಜಿಲ್ಲಾ ತಾಲ್ಲೂಕು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು;

ಆ) ಜನ ಸಾಮಾನ್ಯರಿಗೆ ವಿವಿಧ ರೋಗಗಳ ಕುರಿತು ಸೂಕ್ತ ಮಾಹಿತಿ ನೀಡುವಂತಹ ಕನ್ನಡ ಪುಸ್ತಕಗಳನ್ನು ಸರ್ಕಾರಿ ಆಸ್ಪತ್ರೆಗಳಿಗೆ ಬರತಕ್ಕ ರೋಗಿಗಳಿಗೆ ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಜಿಲ್ಲಾ ಆಸ್ಪತ್ರೆಗಳು 24, ಸಾರ್ವಜನಿಕ 42, ತಾಲ್ಲೂಕು -111 ಪ್ರಾ.ಆ. ಕೇಂದ್ರಗಳು 1685, ಪ್ರಾ.ಆ. ಘಟಕಗಳು 567

ಅ) ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಏಡ್ಸ್ , ಮಧುಮೇಹ, ಟ್ರಾಕೋಮಾ, ಮಲೇರಿಯಾ ಕ್ಷಯ, ಕುಷ್ಠ, ಆನೇಕಾಲು ರೋಗ, ಕರಳುಬೇನೆ, ಕಾಲರಾ, ಪೋಲಿಯೋ ಕಾಮಾಲೆ, ಮೆದಳು ಜ್ವರ, ಡೆಂಗುಜ್ವರ ಮುಂತಾದ ರೋಗಗಳಿಗೆಸಂಬಂಧಿಸಿದಂತೆ ಸರಳ ಮಾಹಿತಿ ನೀಡುವ ಕರಪತ್ರಗಳನ್ನು ಮತ್ತು ಮಡಿಕೆ ಪತ್ರಗಳನ್ನು ಆಕರ್ಷಣೀಯವಾಗಿ ಮುದ್ರಿಸಿ ಹಂಚುವ ಮೂಲಕ ಈ ರೋಗಗಳ ಬಗ್ಗೆ ಮಾಹಿತಿಯನ್ನು ಪರಿಣಾಮಕಾರಿಯಾಗಿ ಸಾರ್ವಜನಿಕರಿಗೆ ಮುಟ್ಟಿಸಲಾಗುತ್ತಿದೆ. ಅಲ್ಲದೇ ಈ ರೋಗಗಳಿಗೆ ಸಂಬಂಧಿಸಿದ ಮತ್ತು ಆರೋಗ್ಯ ಸಂಬಂಧದ ರಾಷ್ಟ್ರೀಯ ಮತ್ತು ರಾಜ್ಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುವ ಫಲಕಗಳನ್ನು ರಾಜ್ಯದ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು, ಸರ್ಕಾರಿ ಕಛೇರಿಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಲಾಗುತ್ತಿದೆ. ಇದಲ್ಲದೆ ಇಲಾಖೆಯ ಕ್ಷೇತ್ರಕಾರ್ಯ ಸಿಬ್ಬಂದಿಯವರು ಈ ಎಲ್ಲಾ ಮಾಹಿತಿಯನ್ನು ಜನರಿಗೆ ನೇರವಾಗಿ ವಿವರಿಸಿ ಮುಟ್ಟಿಸುವ ಕಾರ್ಯಕ್ರಮ ನಡೆದಿದೆ. ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಅವಶ್ಯ ಆರೋಗ್ಯ ಮಾಹಿತಿಗಳನ್ನು ಪುಸ್ತಕ ರೂಪದಲ್ಲಿ ಕೊಡಬಹುದಾದಕ್ಕಿಂತ ಪರಿಣಾಮಕಾರಿಯಾಗಿ ಈ ಮೇಲೆ ವಿವರಿಸಿದ ಕ್ರಮಗಳ ಮೂಲಕ ಮಾಹಿತಿಗಳನ್ನು ತಲುಪಿಸಲಾಗುತ್ತಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿನ ಶವಾಗಾರದಲ್ಲಿ ಶವ ಸಂರಕ್ಷಣೆಗೆ ಕ್ರಮ

2560 (2978) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪ್ರತಿದಿನ ಸರಾಸರಿ ಎಷ್ಟು ಹೆಣಗಳು ವಿಕ್ಟೋರಿಯಾ ಆಸ್ಪತ್ರೆಯಾ ಶವಾಗಾರಕ್ಕೆ ಮರಣೊತ್ತರ ಪರೀಕ್ಷೆಗಾಗಿ ಬರುತ್ತವೆ?

ಆ) ಈ ಹೆಣಗಳನ್ನು ಸಂರಕ್ಷಿಸಲು ಬೇಕಾದ ಮಂಜೂಗಡೆ ಹಾಗೂ ಇತರ ಔಷಧಿಗಳಿಗೆ ಒದಗಿಸುತ್ತಿರುವ ಹಣವೆಷ್ಟು?

ಇ) ಅನಾಥ ಶವಗಳನ್ನು ಸಂರಕ್ಷಿಸಲು ಹಾಗೂ ಅವುಗಳನ್ನು ಕೂಡಲೇ ಶವ ಪರೀಕ್ಷೆ ನಡೆಸಿ, ಅಂತ್ಯ ಸಂಸ್ಕಾರ ಮಾಡುವ ಸಂಬಂಧದಲ್ಲಿ ಸರ್ಕಾರದಲ್ಲಿರುವ ವ್ಯವಸ್ಥೆ ಯಾವುದು?

ಈ) ಈ ಆಸ್ಪತ್ರೆಯ ಆವರಣದಲ್ಲಿ ಕೊಳೆತ ಶವಗಳು ಅನಾಥವಾಗಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಊ) ಈ ಆಸ್ಪತ್ರೆಯಲ್ಲಿ ಶವಗಳ ಮರಣೊತ್ತರ ಪರೀಕ್ಷೆಯನ್ನು ಕೂಡಲೇ ನಡೆಸಿ ಸಂಬಂಧಿಗಳಿಗೆ ಆಗುತ್ತಿರುವ ಕಿರುಕುಳ ಹಾಗೂ ತೊಂದರೆಯನ್ನು ತಪ್ಪಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?